**2 ನೇ ಅಧಿಕ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ**

**ಚನ್ನರಾಯಪಟ್ಟಣ**

**ಸಿಸಿ ಸಂಖ್ಯೆ 879/2020 CW-3 PW-1**

**ಸಾಕ್ಷಿಯನ್ನು ದಿಃ 04.11.2022 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

| | |
|---|---|
| ಹೆಸರುಃ | ಶಿವಕುಮಾರಸ್ವಾಮಿ .ಜಿ.ಎನ್ |
| ತಂದೆಯ ಹೆಸರುಃ | ನಂಜೇಗೌಡ |
| ವಯಸ್ಸುಃ | 53 |
| ವೃತ್ತಿಃ | ವ್ಯವಸಾಯ |
| ವಾಸ ಸ್ಥಳಃ | ಗಂಜಿಗೆರೆ ಗ್ರಾಮ |

**ಮುಖ್ಯವಿಚಾರಣೆಃ ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ಚಾಸಾ-1, 2 ನನಗೆ ಗೊತ್ತು. ನ್ಯಾಯಾಲಯದ ಮುಂದೆ ಇರುವ ಆರೋಪಿತರು ನನಗೆ ಗೊತ್ತು. 1 ಮತ್ತು 2 ನೇ ಆರೋಪಿತರು ಚಾಸಾ-1 ಅವರ ತಮ್ಮನ ಮಕ್ಕಳು. ಚಾಸಾ-1 ಅವರ ಈಗ 7-8 ತಿಂಗಳ ಹಿಂದೆ ಮೃತಪಟ್ಟಿರುತ್ತಾರೆ. ನನಗೆ ಗಂಜಿಗೆರೆ ಗ್ರಾಮದಲ್ಲಿ ತೋಟ ಇದೆ. ಚಾಸಾ-1 ಮತ್ತು ಚಾಸಾ-2 ಅವರ ಜಮೀನಿನ ಸ್ವಲ್ಪ ಮುಂದೆ ನನ್ನ ಜಮೀನಿರುತ್ತದೆ. ಸುಮಾರು 2 ವರ್ಷಗಳ ಹಿಂದೆ ಮದ್ಯಾಹ್ನ 12 ರಿಂದ 1 ಗಂಟೆಯ ಸಮಯದಲ್ಲಿ ನಾನು ನನ್ನ ಜಮೀನಿನ ಬಳಿಯಿಂದ ಊಟಕ್ಕೆಂದು ಮನೆಗೆ ಬರುತ್ತಿದ್ದೆ. ಆ ಸಮಯದಲ್ಲಿ ಚಾಸಾ-1 ಅವರು ತಮ್ಮ ಜಮೀನಿನ ಕಡೆಯಿಂದ ನಡೆದುಕೊಂಡು ಬರುತ್ತಿದ್ದರು ಮತ್ತು ನನ್ನ ತಮ್ಮನ ಮಕ್ಕಳು ನನ್ನ ಮೇಲೆ ಹಲ್ಲೆ ಮಾಡಿದ್ದಾರೆ ನನ್ನನ್ನು ಮನೆಯ ಹತ್ತಿರ ಬಿಡು ಎಂದು ಕೇಳಿದರು. ಆಗ ನಾನು ನನ್ನ ಬೈಕಿನಲ್ಲಿ ಚಾಸಾ-1 ಅವರನ್ನು ಊರಿನ ಒಳಗೆ ತಂದು ಬಿಟ್ಟಿರುತ್ತೇನೆ. ಚಾಸಾ-1 ಅವರಿಗೆ ಏನಾಯಿತು ಎಂಬ ವಿಚಾರ ನಾನು ಕೇಳಿರುವುದಿಲ್ಲ. ಗಲಾಟೆಯ ವಿಚಾರವಾಗಿ ನಾನು ಪೋಲೀಸರಿಗೆ ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ.

**(ಈ ಹಂತದಲ್ಲಿ ಮಾನ್ಯ ಎಪಿಪಿಯವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು.)**

**ಪಾಟೀ ಸವಾಲುಃ ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ದಿ.25.08.2020 ರಂದು ಮದ್ಯಾಹ್ನ 1.20 ಗಂಟೆಯ ಸಮಯದಲ್ಲಿ ನಾನು ನನ್ನ ತೋಟದ ಹತ್ತಿರ ಇದ್ದಾಗ ಚಾಸಾ-1 ಅವರು ಮುದ್ದಪ್ಪಶೆಟ್ಟಿ ಅವರ ತೆಂಗಿನ ತೋಟದಲ್ಲಿ ದನಗಳನ್ನು ಮೇಯಿಸುತ್ತಿದ್ದರು ಅಂದರೆ ಸರಿಯಲ್ಲ. ಆ ಸಮಯದಲ್ಲಿ ಆರೋಪಿತರು ಅಲ್ಲಿಗೆ ಬಂದು ಚಾಸಾ-1 ಅವರ ಜೊತೆ ದಾರಿಯ ವಿಚಾರದಲ್ಲಿ ನಮ್ಮ ತಂದೆಯ ಜೊತೆ ಗಲಾಟೆ ಮಾಡಿದ್ದೀರ ಸೂಳೇ ಮಗನೇ ಲೋಫರ್ ನನ್ನ ಮಗನೇ ಎಂಬ ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ ಅಂದರೆ ಸರಿಯಲ್ಲ 1 ನೇ ಆರೋಪಿ ಅಲ್ಲೇ ಇದ್ದ ದೊಣ್ಣೆಯಿಂದ ಚಾಸಾ-1 ಅವರ ತಲೆಗೆ ಮತ್ತು 2 ನೇ ಆರೋಪಿಯು ಎಡಮಟ್ಟೆಯಿಂದ ಚಾಸಾ-1 ಅವರ ಬೆನ್ನಿಗೆ ಮತ್ತು ಕುತ್ತಿಗೆಗೆ ಹಾಗೂ 3 ನೇ ಆರೋಪಿಯು ಕೈಗಳಿಂದ ಮೈ ಕೈಗೆ ಹೊಡೆದು ನೋವನ್ನುಂಟು ಮಾಡಿರುತ್ತಾರೆ ಅಂದರೆ ಸರಿಯಲ್ಲ. ನೋವನ್ನು ತಾಳಲಾರದೇ ಚಾಸಾ-1 ಅವರು ಕೂಗಿಕೊಂಡಾಗ ನಾನು ಮತ್ತು ಚಾಸಾ-2 ಹೋಗಿ ಜಗಳವನ್ನು ಬಿಡಿಸಿರುತ್ತೇವೆ ಅಂದರೆ ಸರಿಯಲ್ಲ. ಆ ಸಮಯದಲ್ಲಿ 1 ಮತ್ತು 2 ನೇ ಆರೋಪಿತರು ಚಾಸಾ-1 ಅವರಿಗೆ ಕೊಲೆ ಬೆದರಿಕೆ ಹಾಕಿದ್ದಾರೆ ಅಂದರೆ ಸರಿಯಲ್ಲ ಮತ್ತು ಆರೋಪಿತರು ದೊಣ್ಣೆ ಮತ್ತು ಎಡಮಟ್ಟೆಯನ್ನು ಅಲ್ಲೇ ಎಸೆದು ಹೋಗಿದ್ದು ನಾನು ಮತ್ತು ಚಾಸಾ-2 ಏಟಾಗಿದ್ದ ಚಾಸಾ-1 ಅವರನ್ನು ನನ್ನ ಬೈಕಿನಲ್ಲಿಯೇ ಅವರ ಮನೆಯ ಹತ್ತಿರ ಕರೆದುಕೊಂಡು ಬಂದಿರುತ್ತೇನೆ ಅಂದರೆ ಸರಿಯಲ್ಲ. ಆ ನಂತರ ಚಾಸಾ-2 ಅವರು ಚಾಸಾ-1 ಅವರನ್ನು ಆಟೋದಲ್ಲಿ ನುಗ್ಗೇಹಳ್ಳಿ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ ಅಂದರೆ ಸರಿಯಲ್ಲ. ಈ ಬಗ್ಗೆ ನಾನು ಈಗ ಓದಿ ಹೇಳಿದ ರೀತ್ಯಾ ಹೇಳಿಕೆ ಕೊಟ್ಟಿರುತ್ತೇನೆ ಅಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿಪಿ.1 ಎಂದು ಗುರುತಿಸಲಾಯಿತು.

ಈಗ ನಾನು ಆರೋಪಿತರ ಜೊತೆ ಚನ್ನಾಗಿರುತ್ತೇನೆ ಅಂದರೆ ಸರಿ . ಆ ಕಾರಣಕ್ಕಾಗಿ ನಿಪಿ.1 ರಂತೆ ಘಟನೆಯ ಬಗ್ಗೆ ಹೇಳಿಕೆ ಕೊಟ್ಟಿದ್ದರೂ ಸಹ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿತರ ಪರ .ವಕೀಲರಿಂದಃ ಇರುವುದಿಲ್ಲ.**

**ಮರುವಿಚಾರಣೆಃ ಇಲ್ಲಾ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಲಾಗಿದೆ).**

**ಓ ಹೇ ಕೇ ಸರಿ ಇದೆ.**

**(ಮಮತ.ಪಿ)**
**2 ನೇ ಅಧಿಕ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ., ಚನ್ನರಾಯಪಟ್ಟಣ.**